MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - FRIDAY 7-10-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಪಾಮೆಣ್ಣೆ ದರ ಹೆಚ್ಚಳ

ಮತ್ತೆ ಪ್ರತಿಕೂಲ ಹವಾಮಾನದಿಂದ ಉತ್ಪಾದನೆ ಇಳಿಕೆಯ ಭೀತಿಯಿಂದ ಹಾಗೂ ಕ್ರೂಡ್ ಎಣ್ಣೆ ದರಗಳ ಹೆಚ್ಚಳದಿಂದ ಬಯೋಡೀಸೆಲ್ ಬಳಕೆಗೆ ಪಾಮೆಣ್ಣೆ ಆಕರ್ಷಕವಾದ್ದರಿಂದ ಮಲೇಶೀಯನ್ ಪಾಮೆಣ್ಣೆ ದರಗಳು ಹೆಚ್ಚಳವಾಗಿವೆ. ಸೆಪ್ಟೆಂಬರ್ ತಿಂಗಳಲ್ಲಿ ಮಲೇಶಿಯನ್ ಪಾಮೆಣ್ಣೆ ದಾಸ್ತಾನು 2019 ರ ನಂತರ ಅತೀ ಹೆಚ್ಚಳ ಕಂಡಿದೆ. ಇದರಿಂದ ದರ ಇಳಿಕೆಯ ಹಾದಿಯಲ್ಲಿತ್ತು. ಮುಂದೆಯೂ ಉತ್ಪಾದನೆ ಹೆಚ್ಚಳ ಹಾಗೂ ಬೇಡಿಕೆ ಇಳಿಕೆಯ ಸಾಧ್ಯತೆಯಿಂದ ದರ ಮತ್ತೆ ಹಿನ್ನಡೆಯಾಗುವ ಸಾಧ್ಯತೆಯಿದೆ. ಜಾಗತಿಕ ಆರ್ಥಿಕ ಹಿನ್ನಡೆ ಕಂಡು ಬೇಡಿಕೆ ಇಳಿಕೆಯಾಗುವ ಸಾಧ್ಯತೆಯಿದೆ.

## ಜೋಳ ಆವಕ ಇಳಿಕೆ ದರ ಹೆಚ್ಚಳ

ಕರ್ನಾಟಕದ ದಾವಣಗೆರೆ ಮಾರುಕಟ್ಟೆಗೆ ಜೋಳ ಆವಕ ಇಳಿಕೆಯಾಗಿದ್ದು ದರ ಹೆಚ್ಚಳವಾಗಿವೆ. ಬಿಹಾರ ದರ ಇಳಿಕೆಯಿಂದ ಮಾರುಕಟ್ಟೆ ದುರ್ಬಲವಾಗಿದೆ. ಗೋಧಿ ದರಗಳು ಸ್ಥಿರವಿದೆ.

## ದೀಪಾವಳಿ ಬೇಡಿಕೆಯಿಂದ ಉತ್ತರಭಾರತದಲ್ಲಿ ಸಕ್ಕರೆ ದರ ಹೆಚ್ಚಳ ಸಾಧ್ಯತೆ

ಉತ್ತರಭಾರತದಲ್ಲಿ ದೀಪಾವಳಿ ಹಬ್ಬಕ್ಕೆ ಸಕ್ಕರೆ ಬೇಡಿಕೆ ಹೆಚ್ಚಳವಾಗುವ ಸಂಭವವಿದೆ. ಪ್ರಮುಖ ಮಾರುಕಟ್ಟೆಗಳಲ್ಲಿ ಸಕ್ಕರೆ ದರಗಳು ಹೆಚ್ಚಳವಾಗಿದೆ. ಮುಂದಿನ ದಿನಗಳಲ್ಲಿ ಸಕ್ಕರೆ ಇನ್ನೂ ಹೆಚ್ಚಳವಾಗುವ ಸಾಧ್ಯತೆಯಿದೆ.

## ಸತತ 6 ನೇ ದಿನ ಮಲೇಶೀಯನ್ ಪಾಮೆಣ್ಣೆ ಫ್ಯೂಚರ್ ದರ ಹೆಚ್ಚಳ

ಸತತ 6 ನೇ ದಿನ ಮಲೇಶೀಯನ್ ಪಾಮೆಣ್ಣೆ ಫ್ಯೂಚರ್ ದರ ಹೆಚ್ಚಳವಾಗಿದ್ದು ಇಂದು 4 ಶೇಕಡಾ, 160 ರಿಂಗಿಟ್ಸ್ ದರ ಹೆಚ್ಚಳವಾಗಿದೆ. (ಟನ್). ಕ್ರೂಡ್ ಆಯಿಲ್ ಹಾಗೂ ಸೋಯಾ ಎಣ್ಣೆ ಜಾಗತಿಕ ದರ ಹೆಚ್ಚಳ ಕಂಡಿದೆ. ಉತ್ಪಾದನೆ ಹೆಚ್ಚಳದಿಂದ ದಾಸ್ತಾನು ಹೆಚ್ಚಳವಾಗುತ್ತಿರುವುದರಿಂದ ನಿರಂತರದ ಹೆಚ್ಚಳದಲ್ಲಿರಲು ಸಾಧ್ಯವಾಗುತ್ತಿಲ್ಲ ಹಾಗೂ ದಾಸ್ತಾನು ಹೆಚ್ಚಳ ಮತ್ತೆ ದರ ದುರ್ಬಲಗೊಳ್ಳಲು ಕಾರಣವಾಗುವ ಸಾಧ್ಯತೆಯಿದೆ.